ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 20/09/2019

# ತಿಹಾರ್ ಜೈಲಿನಲ್ಲಿ ಚಿದಂಬರಂ ಜೊತೆ ಡಿಕೆಶಿ

## ಲಂಡನ್ ಕಾರಾಗೃಹದಲ್ಲಿ ನೀರವ್ ಮೋದಿ

ನವದೆಹಲಿ: ಆರ್ಥಿಕ ಅಪರಾಧ ಪ್ರಕರಣಗಳ ಆರೋಪಡಡಿ ಕೇಂದ್ರ ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕಾನೂನು ಕ್ರಮಗಳಿಂದಾಗಿ ಕೆಲ ಪ್ರಮುಖ ಕಾಂಗ್ರೆಸ್ ನಾಯಕರು ಜೈಲಿನಲ್ಲೇ ದಿನಗಳನ್ನು ದೂಡುವಂತಾಗಿದೆ. ಭಾರೀ ಬ್ಯಾಂಕ್ ವಂಚನೆ ಹಗರಣದ ರೂವಾರಿ ವಜ್ರ ವ್ಯಾಪಾರಿ ನೀರವ್ ಮೋದಿಗೂ ಜೈಲೇ ಗತಿಯಾಗಿದೆ.

ಅಕ್ರಮ ಆಸ್ತಿಗಳಿಕೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ ಅಡಕತ್ತರಿಯಲ್ಲಿ ಸಿಲುಕಿರುವ ಕರ್ನಾಟಕದ ಪ್ರಭಾವಿ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಚಿವ ಡಿ.ಕೆ. ಶಿವಕುಮಾರ್ ಜಾಮೀನು ಅರ್ಜಿಯ ವಿಚಾರಣೆಯನ್ನು ಶನಿವಾರಕ್ಕೆ ಮುಂದೂಡಲಾಗಿದೆ. ಹೀಗಾಗಿ ಅನಾರೋಗ್ಯದ ಕಾರಣ ಆಸ್ಪತ್ರೆ ಆಶ್ರಯ ಪಡೆದಿದ್ದ ಅವರು ತಿಹಾರ್ ಜೈಲಿಗೆ ಮರಳುವಂತಾಗಿದೆ.

### ಜೈಲಿನಲ್ಲೇ ಗಾಂಧಿ ಜಯಂತಿ

ಐಎನ್‌ಎಕ್ಸ್ ಮೀಡಿಯಾ ಹಗರಣದಲ್ಲಿ ದೆಹಲಿ ವಿಶೇಷ ನ್ಯಾಯಾಲಯ ಮಾಜಿ ಕೇಂದ್ರ ಸಚಿವ ಪಿ.ಚಿದಂಬರಂ ನ್ಯಾಯಾಂಗ ಕಸ್ಟಡಿ ಅವಧಿಯನ್ನು ಅಕ್ಟೋಬರ್ 3ರವರೆಗೆ ವಿಸ್ತರಿಸಿದೆ. ಹೀಗಾಗಿ ಈ ಹಿರಿಯ ಕಾಂಗ್ರೆಸ್ ಧುರೀಣ ತಿಹಾರ್ ಜೈಲಿನಲ್ಲಿಯೇ ಗಾಂಧಿಜಯಂತಿ ಆಚರಿಸಬೇಕಾದ ಪರಿಸ್ಥಿತಿ ಬಂದೊದಗಿದೆ.

### ಹೆಲಿಕಾಪ್ಟರ್ ಹಗರಣ

ಅಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಖರೀದಿ ಹಗರಣದಲ್ಲಿ ಮಧ್ಯಪ್ರದೇಶ ಮುಖ್ಯಮಂತ್ರಿ ಕಮಲ್‌ನಾಥ್ ಅಳಿಯ ರತುಲ್ ಪುರಿಯನ್ನು ದೆಹಲಿ ವಿಶೇಷ ನ್ಯಾಯಾಲಯ ಅಕ್ಟೋಬರ್ 1 ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿ ಆದೇಶ ಹೊರಡಿಸಿದೆ.

### ಭೂಮಿ ಹಕ್ಕು ರದ್ದು

ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಆರೋಪಿಯಾಗಿರುವ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಅಳಿಯ ರಾಬರ್ಟ್ ವಾದ್ರಾರವರಿಗೆ ಹರ್ಯಾಣದಲ್ಲಿ ಮಂಜೂರಾಗಿದ್ದ ಭೂಮಿಯ ಹಕ್ಕು ರದ್ದತಿ ಪ್ರಕ್ರಿಯೆಗೆ ಜಾರಿ ನಿರ್ದೇಶನಾಲಯ ಇದೀಗ ಚಾಲನೆ ನೀಡಿದೆ.

### ಪಿಎನ್‌ಬಿ ಪ್ರಕರಣ

ದೇಶದ ಅತಿದೊಡ್ಡ ಬ್ಯಾಂಕ್ ವಂಚನೆ ಪ್ರಕರಣದಲ್ಲಿ ಲಂಡನ್ ಜೈಲಿನಲ್ಲಿರುವ ವಜ್ರ ವ್ಯಾಪಾರಿ ನೀರವ್ ಮೋದಿಯವರ ನ್ಯಾಯಾಂಗ ಕಸ್ಟಡಿ ಅವಧಿಯನ್ನು ಬ್ರಿಟನ್ ನ್ಯಾಯಾಲಯ ಇನ್ನೂ 1 ತಿಂಗಳು ವಿಸ್ತರಿಸಿದೆ.

- ಚಿದಂಬರಂಗೆ ಅ.3ರವರೆಗೆ ಜೈಲೇಗತಿ
- ಜಾಮೀನು ಅರ್ಜಿ ಶನಿವಾರ ವಿಚಾರಣೆ
- ನೀರವ್‌ಮೋದಿ ಸೆರೆವಾಸ ವಿಸ್ತರಣೆ





